

ಗೋಪಾಲಗೌಡರ ನೇತೃತ್ವದಲ್ಲಿ ನಡೆದ ಡಾ. ವಿಷ್ಣುಮೂರ್ತಿ ಮತ್ತು ರೇಖಾ ಮೂರ್ತಿ ಮದುವೆ

ಮದುವೆಯನ್ನು ನೋಡಿರಲೇ ಇಲ್ಲ. ಆದರೆ, 'ಗೋಪಾಲಗೌಡರ ಮತ್ತು ವಿಷ್ಣುಮೂರ್ತಿಯವರ ಕಾರಣದಿಂದಾಗಿ, ಈ ರೀತಿಯ ಸರಳ ಮದುವೆಯನ್ನು ಆಯೋಜಿಸಲಾಗಿತ್ತು; ಹಿರೇತೋಟದವರಿಗೇ ಬಿಟ್ಟಿದ್ದರೆ, ಇದು ಇನ್ನೂ ಬೇರೆ ರೀತಿಯ ಅಸಾಧಾರಣ ಸ್ವರೂಪ ಪಡೆಯುತ್ತಿತ್ತು,' ಎಂದು ಅಲ್ಲಿಯ ಮಿತ್ರರು ಹೇಳಿದರು. ಮಲೆನಾಡಿನಲ್ಲಿ ಮದುವೆಗೆ ಬಂದವರಿಗೆಲ್ಲ ತೆಂಗಿನಕಾಯಿ ಕೊಟ್ಟು ಕಳಿಸುತಿದ್ದರು. ಧಾರವಾಡದ ನಮಗೆ ಇದು ಸಹ ಹೊಸದು.

ಮದುವೆಯಾದ ಕೆಲ ಕಾಲದ ನಂತರ ಡಾ. ವಿಷ್ಣುಮೂರ್ತಿ ಮತ್ತು ರೇಖಾ ಮೂರ್ತಿ ಗೋಪಾಲಗೌಡರನ್ನು ಕರೆದುಕೊಂಡು ಧಾರವಾಡ, ಹುಬ್ಬಳ್ಳಿ ಕಡೆಯ ತಮ್ಮ ಎಲ್ಲ ಮಿತ್ರರನ್ನೂ ನೋಡಲು ಬಂದಿದ್ದರು. ಆಗಲೂ ಹುಬ್ಬಳ್ಳಿಯ ವುಡ್‌ಲ್ಯಾಂಡ್ಸ್‌ನಲ್ಲಿಯೇ ವಸತಿ ಮಾಡಿದ್ದರು. ನಮ್ಮ ಮನೆಯಲ್ಲಿ ಊಟ ಮಾಡಿ, ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತ, ಏಳೆಂಟು ತಾಸು ಕಳೆದಿದ್ದರು (1970ರ ಡಿಸೆಂಬರ್ 2). ಮುಖ್ಯವಾಗಿ ರೇಖಾ ಅವರಿಗೆ ನಮ್ಮ ಭಾಗದಲ್ಲಿ ಬೇರು ಬಿಟ್ಟಿದ್ದ ವಿಷ್ಣುಮೂರ್ತಿಯ ಸಂಬಂಧಗಳನ್ನು ತೋರಿಸುವ ಮನಸ್ಸು ಗೌಡರಿಗಿತ್ತು.

## 6

ಶಿವಮೊಗ್ಗೆಯ ನಂತರ, ಕೆಲ ಕಾಲ ಕೋಣಂದೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ (ಪಿಎಚ್‌ಸಿ) ಸೇವೆ ಸಲ್ಲಿಸಿದ್ದ ಡಾ. ವಿಷ್ಣುಮೂರ್ತಿ, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಸರ್ಜರಿ ವಿಭಾಗದಲ್ಲಿ ಉನ್ನತ ಶಿಕ್ಷಣ ಪಡೆದರು, ನಂತರ ಅಲ್ಲಿಯೇ ನಿಯುಕ್ತಿ ಪಡೆದು, ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಹಾಗೂ ಕೆ.ಆರ್. ಆಸ್ಪತ್ರೆಯಲ್ಲಿ ಸರ್ಜನ್ ಆದರು. ಮೊದಲು ಪಡುವಾರಹಳ್ಳಿ, ಆ ಮೇಲೆ ಸರಸ್ವತೀಪುರಂ,